(ಇಂದು ದಿನಾಂಕ 05.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು:- ವಾದಿ ಪರ ವಕೀಲರಿಂದ:-**

ದಾವಾ ಆಸ್ತಿಗಳು ನನ್ನ ತಂದೆ ರಾಮಯ್ಯನಿಗೆ ಸೇರಿದ್ದು, ಎಂದರೆ ಸರಿ. ನನ್ನ ತಂದೆ ದಾವಾ ಆಸ್ತಿಗಳನ್ನು ನನಗೂ ಹಾಗೂ ನನ್ನ ಸಹೋದರನಿಗೆ ವಿಭಾಗ ಮಾಡಿಕೊಟ್ಟಿದ್ದಾರೆ. ವಿಭಾಗದಲ್ಲಿ ದಾವಾ ಎ ಷೆಡ್ಯೂಲ್ ಆಸ್ತಿಗಳನ್ನು ನನ್ನ ಸಹೋದರನಿಗೆ ನೀಡಿದ್ದಾರೆ. ಬಿ ಷೆಡ್ಯೂಲ್ ಆಸ್ತಿಗಳನ್ನು ನನ್ನ ಭಾಗಕ್ಕೆ ಕೊಟ್ಟಿದ್ದಾರೆ. ಬಿ ಷೆಡ್ಯೂಲ್ ಆಸ್ತಿಗಳು ನನ್ನ ಭಾಗಕ್ಕೆ ನೀಡಿದ ನಂತರ ಕಂದಾಯ ದಾಖಲೆಗಳು ನನ್ನ ಹೆಸರಿಗೆ ಆಗಲಿಲ್ಲ. ಎ ಷೆಡ್ಯೂಲ್ ಆಸ್ತಿಗಳು ನನ್ನ ಸಹೋದರನಿಗೆ ಕೊಟ್ಟ ನಂತರ ಕಂದಾಯ ದಾಖಲೆಗಳು ನಿಮ್ಮ ಸಹೋದರನ ಹೆಸರಿಗೆ ಆಗಿದ್ದವು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಮೂಲತಃ ಬಿದರಗುಪ್ಪೆ ಗ್ರಾಮದವನು. ನಾನು 7 ನೇ ತರಗತಿವರೆಗೆ ಓದಿರುತ್ತೇನೆ. ನಾನು 1988 ರಲ್ಲಿ ಬಿಎಮ್ ಟಿ ಸಿ ಚಾಲಕನಾಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನಾನು ಕೆಲಸಕ್ಕೆ ಸೇರಿಕೊಂಡ ನಂತರ ಬೆಂಗಳೂರಿನ ಜೀವಭೀಮ ನಗರದಲ್ಲಿ ಕುಟುಂಬದೊಂದಿಗೆ ವಾಸವಾಗಿದ್ದೆ. 1980 ರಲ್ಲೇ ನಾನು ಬೆಂಗಳೂರಿಗೆ ಹೋಗಿ ನೆಲೆಸಿದ್ದೆ. ನಾನು ಆಗಿನಿಂದ ಈಗಿನವರೆಗೂ ಬೆಂಗಳೂರಿನಲ್ಲೇ ವಾಸವಾಗಿದ್ದೇನೆ. ನಾನು ಈಗ ಕೊಡತಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನಾವು ಹಾಗೂ ವಾದಿ ಒಂದೇ ಗ್ರಾಮದವರು. ನಮ್ಮ ಹಾಗೂ ವಾದಿಗಳ ನಡುವೆ ಬಾಂಧವ್ಯ ಚೆನ್ನಾಗಿತ್ತು. ನನ್ನ ಸಹೋದರ ಕೃಷ್ಣಪ್ಪ ಕೃಷಿ ಮಾಡುತ್ತಾರೆ. ಅವರು ಮೊದಲು ನಮ್ಮ ಗ್ರಾಮದಲ್ಲಿ ಇದ್ದರು. ಈಗ ತಿಂಡ್ಲು ಅಲ್ಲಿ ಇದ್ದಾರೆ. ಈಗ ನನ್ನ ಸಹೋದರರ ಏನೂ ಮಾಡುತ್ತಾರೆ ಗೊತ್ತಿಲ್ಲ. ವಾದಿಯ ಆಸ್ತಿಗಳು ಹಾಗೂ ದಾವಾ ಆಸ್ತಿಗಳು ಅಕ್ಕಪಕ್ಕದಲ್ಲಿ ಇವೆ ಎಂದರೆ ಸರಿ. ದಾವೆಯ ಪೂರ್ವದಲ್ಲಿ ವಾದಿ ನನಗೆ ನೋಟಿಸ್ ನೀಡಿದ್ದರು, ನಾನು ಅದಕ್ಕೆ ಪ್ರತ್ಯುತ್ತರ ನೀಡಿದ್ದೇನೆ. ಪ್ರತ್ಯುತ್ತರ ನೀಡಲು ನಾವು ಮಾಹಿತಿ ನೀಡಿರುತ್ತೇವೆ. ನೋಟಿಸ್ ನೀಡಿದ ನಂತರ ಈ ದಾವೆ ಹೂಡಿದರು ಎಂದರೆ ಸಾಕ್ಷಿ ನಾವು ಮಾರಾಟ ಮಾಡಿದ ನಂತರ ದಾವೆ ಹೂಡಿದರು. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ್ದೇನೆ. ಪ್ರತಿವಾದಪತ್ರ ಸಲ್ಲಿಸಲು ನಾನೇ ಮಾಹಿತಿ ನೀಡಿದ್ದೇನೆ. ದಿನಾಂಕ 13.12.1992 ರಂದು ನಾನು ಹಾಗೂ ನನ್ನ ತಂದೆ ದಾವಾ ಬಿ ಷೆಡ್ಯೂಲ್ ಆಸ್ತಿಗಳನ್ನು ಮಾರಾಟ ಮಾಡಲು ವಾದಿಯೊಂದಿಗೆ ಮಾತುಕತೆ ಮಾಡಿದ್ದೇವೆ. ನನ್ನ ಜಮೀನನ್ನು ರೂ.1,09,250/-ಕ್ಕೆ ಮಾರಾಟ ಮಾಡಲು ಮಾತುಕತೆ ಆಗಿತ್ತು. ನನ್ನ ತಂದೆಯೇ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು. ನನ್ನ ಪರವಾಗಿ ನನ್ನ ತಂದೆಯೇ ಮಾರಾಟದ ಮಾತುಕತೆ ಮಾಡಿದ್ದರು. ಆ ದಿನ ನಾನು ನನ್ನ ತಂದೆ ಇಬ್ಬರೂ ಸೇರಿ ಕ್ರಯದ ಕರಾರನ್ನು ಮಾಡಿಕೊಟ್ಟೆವು, ಆ ದಿನ ಕಂದಾಯ ದಾಖಲೆಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದ ಕಾರಣ ಅವರು ಸಹ ಕರಾರು ಮಾಡಲು ಬಂದಿದ್ದರು. ಸಾಕ್ಷಿ ನಿಪಿ1 ರಲ್ಲಿನ ನಿಪಿ1(ಎ) ಹಾಗೂ ನಿಪಿ1(ಬಿ) ನನ್ನ ಸಹಿಗಳು ಎಂದು ಹೇಳಿ, ಉಳಿದ ಸಹಿಗಳು ನನ್ನವು ಅಲ್ಲ ಎಂದು ಹೇಳುತ್ತಾರೆ. ಆ ದಿನ 6000/- ರೂಪಾಯಿ ಹಣವನ್ನು

ಮುಂಗಡವಾಗಿ ಪಡೆದಿದ್ದೇವೆ ಎಂದರೆ ಸಾಕ್ಷಿ ನನ್ನ ಪರವಾಗಿ ನನ್ನ ತಂದೆ ಪಡೆದಿದ್ದಾರೆ ಎನ್ನುತ್ತಾರೆ. ನಿಪಿ 1(ಸಿ) ನನ್ನ ಸಹಿ ಅಲ್ಲ. ಪ್ರತಿವಾದಪತ್ರದಲ್ಲಿ ಇರುವ ಸಹಿಗಳು ನನ್ನದೇ. ಅದೇ ದಿನ ನನ್ನ ಸಹೋದರರ ಹಾಗೂ ನನ್ನ ತಂದೆ ನಿಪಿ2 ರಂತೆ ನನ್ನ ಸಹೋದರನ ಎ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ 61,750/- ರೂಪಾಯಿಗಳಿಗೆ ಮಾರಾಟ ಮಾಡಲು ಒಪ್ಪಿ 5000 ರೂ. ಮುಂಗಡ ಹಣ ಪಡೆದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಕರಾರಿನ ಪ್ರಕಾರ 3 ತಿಂಗಳ ಒಳಗೆ ಕ್ರಯಪತ್ರ ಮಾಡಿಕೊಳ್ಳಬೇಕಾಗಿತ್ತು. 3 ತಿಂಗಳಿನಲ್ಲಿ ನನ್ನ ಹೆಸರಿಗೆ ಕಂದಾಯ ದಾಖಲೆ ಬಂದಿರುವುದಿಲ್ಲ. ಕಂದಾಯ ದಾಖಲೆಗಳು ನನ್ನ ಹೆಸರಿನಲ್ಲಿ ಇಲ್ಲದ ಕಾರಣ ಕ್ರಯಪತ್ರ ಮಾಡಿಕೊಳ್ಳಲು ಆಗುತ್ತಿರಲಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಮಾಡಿಕೊಡುತ್ತಿದ್ದರು ಎನ್ನುತ್ತಾರೆ. ವಿಭಾಗ ಆದ ನಂತರ ನನಗೆ ಬಂದ ಆಸ್ತಿಗೆ ನನಗೆ ಬಂದ ಆಸ್ತಿಗೆ ನಾನೇ ಮಾಲೀಕನಾಗಿರುತ್ತೇನೆ. ವಿಭಾಗದಂತೆ ಸ್ವಾಧೀನದಲ್ಲೂ ನಾನೇ ಇದ್ದೆ.

**(ವಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.